ತಾವು ಪಡೆದುಕೊಂಡ ಜಮೀನಿಗೆ ವಾರಸುದಾರರಾಗಲು ರಾಜ್ಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕು ಸದಸ್ಯರ ಹೆಸರಿನಲ್ಲಿ ಸಾಲ ಮಂಜುರು ಮಾಡಿ ಸದರಿ ಹಣವನ್ನು ಜಮೀನಿನ ಮಾಲೀಕರಿಗೆ ಸಂದಾಯ ಮಾಡಿ ಪ್ರತಿ ವರ್ಷವೂ ಕಂತುಗಳಲ್ಲಿ ವಸೂಲಿ ಮಾಡುವ ಬಗ್ಗೆ ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿಸಿ 138 : ಎಲ್‌ಆರ್‌ಎಂ. : 74 ದಿನಾಂಕ 28-6-1974 ರಂದು ತಿಳಿಸಲಾಗಿದೆ. ಹೀಗೆ ನಿಗಧಿಪಡಿಸಿದ ಕಂತುಗಳು ಸಾಲಗಾರರಿಂದ ವಸೂಲಾಗದೇ ಇದ್ದರೆ, ವಸೂಲಾಗದೇ ಇರುವ ಕಂತುಗಳ ಮೊತ್ತದಷ್ಟು ಹಣವನ್ನು ಸರ್ಕಾರವು ಕಾಸ್ಕೆರ್ಡ್ ಬ್ಯಾಂಕಿಗೆ ಅರ್ಥೋಪಾಯ ಆಗ್ರಾಮಧನದ ಮುಂಗಡವನ್ನು ಕೊಡಲು ಸಹ ಸರ್ಕಾರಿ ಆಜ್ಞೆಯಲ್ಲಿ ಅವಕಾಶ ಮಾಡಲಾಗಿದೆ.

ರಾಜ್ಯ ಬ್ಯಾಂಕು ಈವರೆವಿಗೆ ಈ ಬಗ್ಗೆ 11.28 ಕೋಟಿ ರೂಗಳನ್ನು ಮಂಜೂರು ಮಾಡಿದೆ. ಆ ಪೈಕಿ 7.18 ಕೋಟಿ ರೂಪಾಯಿ ಬೇಡಿಕೆ ಬಂದಿದ್ದು, ಅದರ ಪೈಕಿ 30.6.1990ಕ್ಕೆ ಇದ್ದಂತೆ 2.26ಕೋಟಿ ರೂಪಾಯಿ ಸಾಲಗಾರರಿಂದ ಬಾಕಿ ಉಳಿದಿರುತ್ತದೆ. ಈ ಪೈಕಿ ಸರ್ಕಾರ 1.30 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದ್ದು ಬಾಕಿ ಹಣವನ್ನು ಮಂಜೂರು ಮಾಡಬೇಕಾಗಿದೆ.

ಈ ಸಾಲವನ್ನು ಪಡೆದ ರೈತರು ಬಹುತೇಕ ಚಿಕ್ಕ ಮತ್ತು ಅತಿ ಚಿಕ್ಕ ಹಿಡುವಳಿದಾರರಿಂದ, ಅವರ ಮನವಲಿಸಿ ಸಾಲ ವಸೂಲಾತಿಯನ್ನು ಮಾಡಲಾಗುತ್ತಿದೆ. ಒತ್ತಾಯಪೂರಕವಾಗಿ ಸಾಲ ವಸೂಲಾತಿ ಮಾಡಲಾಗಿತ್ತಿಲ್ಲ.

(6) ಗುಲ್ಬರ್ಗಾ ಲಾಮಣಿ ವಸತಿ ಗೃಹದ ಆಡಳಿತ ಮಂಡಲಿಯ ಸಭೆ ಕರೆಯದೆ ಅನುಧಾನ ಪಡೆಯುತ್ತಿರುವುದು.

ಶ್ರೀ ಬಿ.ಎಸ್. ಚವಾಣ್ : ಅಧ್ಯಕ್ಷರೆ, ಗುಲ್ಬರ್ಗಾ ನಗರದಲ್ಲಿ ನಡೆಯುತ್ತಿರುವ ಲಮಾಣಿ ವಿದ್ಯಾರ್ಥಿ ವಸತಿ ಗೃಹದ ಆಡಳಿತ ಮಂಡಳಿಯವರು ಸುಮಾರು ನಾಲ್ಕು ವರ್ಷದಿಂದ ಈವರೆಗೆ ವಾರ್ಷಿಕ ಸಭೆ ಕರೆಯದೆ ಸಮಾಜ ಕಲ್ಯಾಣ ಇಲಾಖೆಯಿಂದ ಅನುದಾನ ಪಡೆಯುತ್ತಿದ್ದಾರೆ. ಆಡಳಿತ ಮಂಡಳಿಯು ನಕಲಿ ಠರಾವು ಪಾಸು ಮಾಡಿ ಅನುದಾನ ಪಡೆದುಕೊಳ್ಳುತ್ತಿದೆ. ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯವರು ಈ ವರ್ಷವು ಕೂಡ ಅನುದಾನ ಕೊಡುವ ವಿಚಾರದಲ್ಲಿ ಇದ್ದಾರೆ. ಈ ಆಡಳಿತ ಮಂಡಳಿಯು ನಾಲ್ಕು ವರ್ಷದಿಂದ ವಾರ್ಷಿಕ ಸಭೆ ಕರೆಯದೆ ಅನುದಾನ ತೆಗೆದುಕೊಳ್ಳುವುದು ತಪ್ಪು. 1990-91ನೇ ಸಾಲಿನ ಆಡಳಿತ ಮಂಡಳಿಯು ಕಾನೂನು ಪ್ರಕಾರ ನಿಜವಾದ ಮಂಡಳಿಯೆಂದು ಜಿಲ್ಲಾ ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್ ಆಫ್ ಸೊಸೈಟಿ ಗುಲ್ಬರ್ಗಾ ಇವರಿಂದ ಕಾಗದ ಪಡೆದುಕೊಂಡರೆ ಮಾತ್ರ ಅನುದಾನ ನೀಡತಕ್ಕದ್ದು. ನಿಜವಾಗಿಯು ಕಾನೂನಿನ ಪ್ರಕಾರ ಈ ಮಂಡಳಿಯೇ ಕ್ರಮಬದ್ಧವಾದ ಮಂಡಳಿಯೆಂದು ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್ ಆಫ್ ಸೊಸೈಟಿ ಗುಲ್ಬರ್ಗಾ ಇವರಿಂದ ಪಡೆದುಕೊಂಡು ಮಾತ್ರ ಅನುದಾನ ಬಿಡುಗಡೆ ಮಾಡಬೇಕು ಇಲ್ಲದೆ ಹೋದರೆ ವಾರ್ಷಿಕ ಅನುದಾನ ತಡೆ ಹಿಡಿದು ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್ ಆಫ್ ಸೊಸೈಟಿ ಗುಲ್ಬರ್ಗಾ ಇವರ ಕಡೆಯಿಂದ ನಿಜವಾಗಿ ಆಡಳಿತ ಮಂಡಳಿ ಕ್ರಮಬದ್ಧವಾದ ಆಡಳಿತ ಮಂಡಳಿ ಆದಾಗ ಮಾತ್ರ ಅನುದಾನ ಕೊಡತಕ್ಕದ್ದು.

ಈ ಆಡಳಿತ ಮಂಡಳಿಯು ನವೀಕರಣ ಮಾಡಿರುವುದಿಲ್ಲ, ಸರ್ಕಾರಕ್ಕೆ ವರ್ಷ, ವರ್ಷ ಲೆಕ್ಕ ಪತ್ರ ಕೊಟ್ಟಿರುವುದಿಲ್ಲ. ಈ ಆಡಳಿತ ಮಂಡಳಿಯ ಮೇಲೆ ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್ ಆಫ್ ಸೊಸೈಟಿ ಗುರ್ಲಗರ್ಗಾ ಅವರು ಕಾನೂನಿನ ಪ್ರಕಾರ ಇವರಿಗೆ ಮೆಮೋ ಕೂಡ ಕೊಟ್ಟಿದ್ದಾರೆ, ಇದಕ್ಕೆ ಉತ್ತರ ಕೂಡ ಕೊಟ್ಟಿಲ್ಲ. ಆದುದರಿಂದ ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್ ಆಫ್ ಸೊಸೈಟಿ ಗುಲ್ಬರ್ಗಾ ಇವರಿಂದ ಆಗಲಿ, ಕರ್ನಾಟಕ

ರಾಜ್ಯ ನೊಂದಾಣಿಕೆ ಇಲಾಖೆಯವರಿಂದ ಆಗಲಿ, 1990-91ನೇ ಸಾಲಿಗಾಗಿ ಇವರೇ ನಿಜವಾದ ಆಡಳಿತ ಮಂಡಳಿ ಎಂದೂ ಸಾಬೀತಾದ ಮೇಲೆ ಅನುಧಾನ ಕೊಡತಕ್ಕದ್ದು.

ಶ್ರೀ ವಿ. ಮುನಿಯಪ್ಪ (ರೇಷ್ಮ ಇಲಾಖೆ ರಾಜ್ಯ ಸಚಿವರು) : ಅಧ್ಯಕ್ಷರೆ, ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರ ಪರವಾಗಿ ಈ ಹೇಳಿಕೆಯನ್ನು ನೀಡುತ್ತಿದ್ದೇನೆ.

ಗುಲ್ಬರ್ಗಾ ನಗರದಲ್ಲಿ ಲಮಾಣಿ ವಿದ್ಯಾರ್ಥಿನಿಲಯದ ಆಡಳಿತ ಮಂಡಳಿಯ ಸಭೆಯನ್ನು ಕರೆಯದಿರುವ ಸಂಗತಿಯು ಸರ್ಕಾರದ ಗಮನಕ್ಕೆ ಬಂದಿಲ್ಲ. ಗುಲ್ಬರ್ಗಾ ಜಿಲ್ಲಾಪರಿಷತ್ತಿನ ಮುಖ್ಯ ಕಾರ್ಯದರ್ಶಿಯವರಿಂದ ಈ ಬಗ್ಗೆ ಈಗಾಗಲೇ ಒಂದು ವಿಚಾರವಾದ ವರದಿಯನ್ನು ಕೋರಲಾಗಿದೆ. ಈ ವರದಿಯು ಬಂದ ನಂತರ ಅನುದಾನಿತ ನಿಯಮಾಳಿಗಳನ್ವಯ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಜಿಲ್ಲಾಪರಿಷತ್ತಿನ ಪತ್ರ ದಿನಾಂಕ 16-3-1991ರನ್ವಯ ಈ ವಿದ್ಯಾರ್ಥಿನಿಲಯದಲ್ಲಿರುವ 57 ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಅನುಧಾನಿತ ನಿಯಮಾವಳಿಗಳನ್ವಯ ಶೇಕಡ 40ರಷ್ಟು ಮಂಗಡ ಹಣವನ್ನು (ಅನುದಾನವನ್ನು ಫೆಬ್ರವರಿ 1991ನೇ ಮಾಹೆಯಲ್ಲಿ ಬಿಡುಗಡೆ ಮಾಡಲಾಗಿದೆ)

ಉಳಿದ ಅನುದಾನವನ್ನು ಪೂರ್ಣ ವರದಿಯನ್ನು ಕಳುಹಿಸುವವರೆವಿಗೂ ಬಿಡುಗಡೆ ಮಾಡದಿರುವಂತೆ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ, ಗುಲ್ಬರ್ಗಾ ಇವರಿಗೆ ಸೂಚನೆ ನೀಡಲಾಗಿದೆ.

ಗುಲ್ಬರ್ಗಾ ಜಿಲ್ಲಾಪರಿಷತ್ತಿನ ಮುಖ್ಯ ಕಾರ್ಯದರ್ಶಿಯವರಿಂದ ವರದಿ ಬಂದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

(7) ಹೊಸಕೋಟೆ ತಾಲ್ಲೂಕು ಬೆಂಡಿಗಾನ ಹಳ್ಳಿಯಲ್ಲಿ ದಿನಾಂಕ 18-1-91ರಂದು ಶ್ರೀ ಗೋಪಾಲಕೃಷ್ಣ ಮತ್ತು ಅವರ ಮನೆಯವರ ಮೇಲೆ ಹಲ್ಲೆ

ಶ್ರೀ ಎನ್. ಚಿಕ್ಕೇಗೌಡ : ಅಧ್ಯಕ್ಷರೆ, ಬೆಂಗಳೂರು ಜಿಲ್ಲಾ ಹೊಸಕೋಟೆ ತಾಲ್ಲೂಕು ನಂದಗುಡಿ ಪೋಲೀಸ್ ಠಾಣೆಗೆ ಸೇರಿದ ಬೆಂಡಿಗಾನಹಳ್ಳಿ ಗ್ರಾಮದಲ್ಲಿ ತಾ. 18-1-91 ಮತ್ತು 19-1-91 ರಂದು ಇದೇ ಗ್ರಾಮದ ಮಂಡಲ ಪ್ರಧಾನರಾದ (ಬೆಂಡಿಗಾನಹಳ್ಳಿ) ಶ್ರೀ ಬಿ.ಎಸ್. ವೆಂಕಟರಮಣಗೌಡ ಮತ್ತು ಇವರ ಮಕ್ಕಳಾದ ಶ್ರೀ ಬಿ.ವಿ. ರಾಜಶೇಖರಗೌಡ ಸತೀಶಗೌಡ, ಪ್ರಕಾಶ್ ಚಿಕ್ಕವೆಂಕಟಗೌಡ, ವಗೈರೆಯವರು ಇದೇ ಊರಿನ ಶ್ರೀ ಎಸ್. ಗೋಪಾಲಕೃಷ್ಣ ಮತ್ತು ಅವರ ಕುಟುಂಬದ 8 ಜನರ ಮೇಲೆ ಒಳಗೆ ನುಗ್ಗಿ ಬಂದೂಕು, ಭರ್ಜಿ, ಮಚ್ಚು ಮತ್ತು ದೊಣ್ಣೆಗಳ ಸಮೇತ ಮನೆಯಲ್ಲಿದ್ದ ಹೆಣ್ಣುಮಕ್ಕಳನ್ನು ಸಹಿತ ಹೊಡೆದು ಇವರ ಮನೆಯಲ್ಲಿದ್ದ ದವಸ, ಚಿನ್ನದ ಒಡವೆ ವಸ್ತುಗಳು, ಊಟದ ಸಾಮಾನುಗಳು (ಸುಮಾರು 4 ಲಕ್ಷ ರೂಪಾಯಿಗಳು ಬೆಲೆ ಬಾಳುವಂತಹವು) ಹಗಲು ದರೋಡೆ ಮಾಡಿ, ತೋಟದಲ್ಲಿ ಇದ್ದ ಗೋಪಾಲಕೃಷ್ಣ ಮತ್ತು ಇತರರನ್ನು ಹೊಡೆದು ತೀವ್ರ ಗಾಯಗೊಳಿಸಿ ಊರಿನಿಂದ ಪಕ್ಕಲೆಬ್ಬಿಸಿ, ಬಯದ ವಾತಾವರಣ ಉಂಟುಮಾಡಿ ತೋಟದ ಬೆಳೆಗಳನ್ನು ಲೂಟಿ ಮಾಡಿ, ಈವರೆಗೂ ಲೂಟಿ ಆದ ಮಾಲನ್ನು ವಶಪಡಿಸಿಕೊಳ್ಳದೆ, ಪಿರ್ಯಾದುದಾರರಿಗೆ ರಕ್ಷಣೆ ಕೂಡದೆ ಇರುವ ವಿಚಾರದ ಬಗ್ಗೆ ಮಾನ್ಯ ಗೃಹ ಸಚಿವರ ಗಮನಕ್ಕೆ ತರುತ್ತಿದ್ದೇನೆ.

ದಿನಾಂಕ 25-1-1991 ರಂದು ಶ್ರೀ ಎಸ್. ಗೋಪಾಲಕೃಷ್ಣ, ಬೆಂಡಿಗಾನಹಳ್ಳಿ ಗ್ರಾಮ ಇವರು ನಂದಗುಡಿ ಪೋಲೀಸ್ ಠಾಣೆಗೆ ದೂರೊಂದನ್ನು ನೀಡಿದ್ದು ದಿನಾಂಕ 19-1-1991ರಂದು ತಾನು ಮತ್ತು ತನ್ನ 2 ಜನ ಮಕ್ಕಳು ಹೊಲದಲ್ಲಿ ಕೆಲಸ